# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸರ್ಕಾರಿ ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳ ಹಾಗೂ ಖಾಸಗಿ ಅನಾಥಾಲಯಗಳ ವಿದ್ಯಾರ್ಥಿಗಳ ಮಾಸಿಕ ಭೋಜನಾ ವೆಚ್ಚದ ದರಗಳನ್ನು ಹೆಚ್ಚಿಸುವ ಬಗ್ಗೆ.

**ಉಲ್ಲೇಖ:-**

1. ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 352 ಬಿಎಂಎಸ್ 2016,. ದಿ:23.07.2016.
2. ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 363 ಬಿಎಂಎಸ್ 2017,. ದಿ:09.05.2017.
3. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಏಕಕಡತ ಪ್ರಸ್ತಾವನೆ ಸಂ. BCWD-12047/1/2018-BCWD_HOSTEL-BCWD, ದಿನಾಂಕ 5.4.2018.

******

## ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮಸಂಖ್ಯೆ(1) ಮತ್ತು (2)ರ ಆದೇಶದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸರ್ಕಾರಿ ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳ ಹಾಗೂ ಖಾಸಗಿ ಅನಾಥಾಲಯಗಳ ವಿದ್ಯಾರ್ಥಿಗಳಿಗೆ ಮಾಸಿಕ ಭೋಜನಾ ವೆಚ್ಚದ ದರಗಳನ್ನು ಪರಿಷ್ಕರಿಸಿ ಆದೇಶಿಸಲಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಯವರು ಆಯವ್ಯಯ ಭಾಷಣದ ಕಂಡಿಕೆ 190 ಹಾಗೂ 192 ರಲ್ಲಿ ಈ ಕೆಳಗಿನಂತೆ ಘೋಷಿಸಿರುತ್ತಾರೆ.

**190** **"2012-13ನೇ ಸಾಲಿನಲ್ಲಿ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಆಹಾರ ವೆಚ್ಚಕ್ಕಾಗಿ ಅನುಕ್ರಮವಾಗಿ ಮಾಹೆಯಾನ 750 ರೂ. ಮತ್ತು 850 ರೂ. ನೀಡಲಾಗುತ್ತಿತ್ತು. 2018-19ನೇ ಸಾಲಿನಲ್ಲಿ ಈ ಮೊತ್ತವನ್ನು ಅನುಕ್ರಮವಾಗಿ 1500 ರೂ. ಮತ್ತು 1600 ರೂ. ಗಳಿಗೆ ಹೆಚ್ಚಿಸಲಾಗುವುದು."**

**192** **ಖಾಸಗಿ ಅನುದಾನಿತ ಅನಾಥಾಲಯಗಳ ವಿದ್ಯಾರ್ಥಿಗಳ ಊಟದ ವೆಚ್ಚದ ದರಗಳನ್ನು ಮಾಹೆಯಾನ ತಲಾ 700 ರೂ. ಗಳಿಂದ 800 ರೂ. ಗಳಿಗೆ ಹೆಚ್ಚಿಸಲಾಗುವುದು.**

ಮೇಲೆ ಕ್ರ.ಸಂ.(2)ರ ಪತ್ರದಲ್ಲಿ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರವರು ಸರ್ಕಾರಿ ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳ ಹಾಗೂ ಖಾಸಗಿ ಅನಾಥಾಲಯಗಳ ವಿದ್ಯಾರ್ಥಿಗಳಿಗೆ ಮಾಸಿಕ ಭೋಜನಾ ವೆಚ್ಚದ ದರಗಳನ್ನು 2018-19ನೇ ಸಾಲಿನ ಜೂನ್ ಮಾಹೆಯಿಂದ ಅನ್ವಯವಾಗುವಂತೆ ಈ ಕೆಳಗಿನಂತೆ ಹೆಚ್ಚಿಸಿ, ಆದೇಶ ಹೊರಡಿಸುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

| ಕ್ರ. ಸಂ. | ಸಂಸ್ಥೆಗಳ ವಿವರ | ಪ್ರತಿ ವಿದ್ಯಾರ್ಥಿಗೆ ಹಾಲಿ ನೀಡುತ್ತಿರುವ ಮಾಸಿಕ ಭೋಜನಾ ವೆಚ್ಚ | ಪ್ರತಿ ವಿದ್ಯಾರ್ಥಿಗೆ ಪರಿಷ್ಕರಿಸಿ, ರೂ.100/-ರಂತೆ ಹೆಚ್ಚಿಸಬೇಕಾಗಿರುವ ಮಾಸಿಕ ಭೋಜನಾ ವೆಚ್ಚ (ರೂ.ಗಳಲ್ಲಿ) |
|---|---|---|---|
| 1 | ಸರ್ಕಾರಿ ಮೆಟ್ರಿಕ್-ಪೂರ್ವ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳಿಗೆ | 1400/- | 1500/- |
| 2 | ಸರ್ಕಾರಿ ಮೆಟ್ರಿಕ್-ನಂತರದ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳಿಗೆ | 1500/- | 1600/- |
| 3 | ಖಾಸಗಿ ಅನಾಥಾಲಯಗಳ ವಿದ್ಯಾರ್ಥಿಗಳಿಗೆ | 700/- | 800/- |

ಮೇಲ್ಕಂಡಂತೆ ಭೋಜನಾ ವೆಚ್ಚದ ದರಗಳನ್ನು ಹೆಚ್ಚಿಸಿದಲ್ಲಿ ಇದಕ್ಕೆ ತಗಲುವ ವೆಚ್ಚವನ್ನು 2018-19ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆಗಳಡಿ ಭರಿಸಲಾಗುವುದೆಂದು ಅದರಂತೆ ಸರ್ಕಾರದ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂ.ಬಿಸಿಡಬ್ಲ್ಯೂ 682 ಬಿಎಂಎಸ್ 2018, ಬೆಂಗಳೂರು, ದಿನಾಂಕ :27.09.2018**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸರ್ಕಾರಿ ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳ ಹಾಗೂ ಖಾಸಗಿ ಅನಾಥಾಲಯಗಳ ವಿದ್ಯಾರ್ಥಿಗಳಿಗೆ ಮಾಸಿಕ ಭೋಜನಾ ವೆಚ್ಚದ ದರಗಳನ್ನು 2018-19ನೇ ಸಾಲಿನ ಜೂನ್ ಮಾಹೆಯಿಂದ ಅನ್ವಯವಾಗುವಂತೆ ಈ ಕೆಳಗಿನಂತೆ ಹೆಚ್ಚಿಸಿ, ಆದೇಶಿಸಲಾಗಿದೆ.

| ಕ್ರ. ಸಂ. | ಸಂಸ್ಥೆಗಳ ವಿವರ | ಪ್ರತಿ ವಿದ್ಯಾರ್ಥಿಗೆ ಹಾಲಿ ನೀಡುತ್ತಿರುವ ಮಾಸಿಕ ಭೋಜನಾ ವೆಚ್ಚ | ಪ್ರತಿ ವಿದ್ಯಾರ್ಥಿಗೆ ಪರಿಷ್ಕರಿಸಿ, ರೂ.100/- ರಂತೆ ಹೆಚ್ಚಿಸಲಾಗಿರುವ ಮಾಸಿಕ ಭೋಜನಾ ವೆಚ್ಚ (ರೂ.ಗಳಲ್ಲಿ) |
|---|---|---|---|
| 1 | ಸರ್ಕಾರಿ ಮೆಟ್ರಿಕ್-ಪೂರ್ವ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳಿಗೆ | 1400/- | 1500/- |
| 2 | ಸರ್ಕಾರಿ ಮೆಟ್ರಿಕ್-ನಂತರದ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳಿಗೆ | 1500/- | 1600/- |
| 3 | ಖಾಸಗಿ ಅನಾಥಾಲಯಗಳ ವಿದ್ಯಾರ್ಥಿಗಳಿಗೆ | 700/- | 800/- |

ಸದರಿ ವೆಚ್ಚವನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆಗಳಡಿ 2018-19ನೇ ಸಾಲಿನಲ್ಲಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

| ಕ್ರ. ಸಂ. | ಲೆಕ್ಕಶೀರ್ಷಿಕೆ | ವಲಯ | 2018-19 ನೇ ಸಾಲಿನಲ್ಲಿ ಒದಗಿಸಿರುವ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|
| 1 | ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಹೊಸ ವಿದ್ಯಾರ್ಥಿ ನಿಲಯಗಳ ಪ್ರಾರಂಭ ಮತ್ತು ನಿರ್ವಹಣೆ ಲೆಕ್ಕಶೀರ್ಷಿಕೆ 2225-03-277-2-53 | ರಾಜ್ಯವಲಯ | 17269.00 |
| 2 | ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳ ನಿರ್ವಹಣೆ ಲೆಕ್ಕಶೀರ್ಷಿಕೆ 2225-00-103-0-26 | ಜಿಲ್ಲಾವಲಯ | 52881.63 |
| 3 | ಅನಾಥಾಲಯಗಳಿಗೆ ಸಹಾಯಾನುದಾನ ಲೆಕ್ಕಶೀರ್ಷಿಕೆ 2225-00-103-0-73 | ಜಿಲ್ಲಾವಲಯ | 654.53 |

2018–19ನೇ ಸಾಲಿನಲ್ಲಿ ಈ ಪ್ರಸ್ತಾವನೆಗೆ ಸಂಬಂಧಿಸಿದಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಚಾಲ್ತಿಯಲ್ಲಿರುವ Delegation of Financial Powers ರಂತೆ ಕ್ರಮವಹಿಸುವ ಹಾಗೂ ಪ್ರಸಕ್ತ ಸಾಲಿಗೆ ಒದಗಿಸಿರುವ ಅನುದಾನದ ಮಿತಿಯಲ್ಲಿಯೇ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಮತ್ತು ಹಾಲಿ ಇರುವ ಮಾರ್ಗಸೂಚಿಯನ್ವಯ, ನಿಯಮಾನುಸಾರ ಮತ್ತು ಪಾರದರ್ಶಕತೆಯನ್ವಯ ಅನುಷ್ಠಾನಗೊಳಿಸುವ ಷರತ್ತಿಗೊಳಪಟ್ಟಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 641 ವೆಚ್ಚ–3/2018 ದಿನಾಂಕ:27.09.2018 ರಲ್ಲಿ ನೀಡಿರುವ ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ:ಪಿಡಿ 17 ಐಎಂಎಂ 2018, ದಿನಾಂಕ:21.04.2018ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕದ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ

(ಆರ್.ಭಾಸ್ಕರ್)
ಸರ್ಕಾರದ ಅಧೀನ ಕಾರ್ಯದರ್ಶಿ–2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

**ಇವರಿಗೆ:–**

1) ಪ್ರಧಾನ ಮಹಾಲೇಖಪಾಲರು, (ಎ ಮತ್ತು ಇ) (ಲೆಕ್ಕಪರಿಶೋಧನೆ–1 ಮತ್ತು 2), ಕರ್ನಾಟಕ, ಬೆಂಗಳೂರು.
2) ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.

3) ರಾಜ್ಯ ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4) ಎಲ್ಲಾ ಜಿಲ್ಲಾಧಿಕಾರಿಗಳು.
5) ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
6) ಎಲ್ಲಾ ಜಿಲ್ಲೆಗಳ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳು.

ಆಯುಕ್ತರು, ಹಿಂವಕ, ಇವರ ಮುಖಾಂತರ

7) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-3&9), ವಿಧಾನಸೌಧ.
9) ನಿರ್ದೇಶಕರು, ಪಿ.ಎಂ.ಐ ವಿಭಾಗ, ಯೋಜನೆ, ಕಾರ್ಯಕ್ರಮ, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ.

<u>ಪ್ರತಿ ಮಾಹಿತಿಗಾಗಿ:-</u>

1) ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ.
2) ಸರ್ಕಾರದ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3) ಸರ್ಕಾರದ ಉಪ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರು,
4) ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು. ..............

*****